**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.2156/2021**

ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | ಃಬಸವರಾಜ | ಸಿಡಬ್ಲ್ಯೂ-7 |
| ತಂದೆ/ ಗಂಡನ ಹೆಸರು | ಃತಿಮ್ಮಣ್ಣ | ಪಿ ಡಬ್ಲ್ಯೂ-2 |
| ವಯಸ್ಸು | ಃ40 ವರ್ಷ | |
| ಉದ್ಯೋಗ | ಃಆಟೋ ಚಾಲಕ | |
| ವಾಸಸ್ಥಳ | ಃಹೆಂಚವೀರನಹಳ್ಳಿ | ದಿಃ20-11-2025. |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಪಾವಗಡ ರಸ್ತೆಯಲ್ಲಿರುವ ಡಿ.ಉಪ್ಪಾರಹಟ್ಟಿ ಗೇಟ್ ನ ಹತ್ತಿರ ಆಪೆ ಆಟೋ ಅಪಘಾತವಾಗಿದ್ದರಿಂದ ಪೊಲೀಸರು ನನ್ನ ಹಾಗೂ ಚಾಸಾ-8 ರವರ ಸಮಕ್ಷಮ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸಂಜೆ 3-30 ರಿಂದ 4-30 ರವರೆಗೆ ಮಹಜರ ಕ್ರಮ ಜರುಗಿಸಿ ಸಹಿ ಪಡೆದಿರುತ್ತಾರೆ.

ಸಾಕ್ಷಿಗೆ ನಿಪಿಃ2 ಮತ್ತು ನಿಪಿಃ4 ರ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ2(ಬಿ) ಮತ್ತು ನಿಪಿಃ4(ಬಿ) ಅಂತ ಗುರುತಿಸಲಾಯಿತು. ನಿಪಿಃ2 ಮತ್ತು 4 ಕ್ಕೆ ಮಹಜರ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿಃ3 ರ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ಮಹಜರ ಸಮಯದಲ್ಲಿ ತೆಗೆಯಲಾಗಿದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಪಿಃ5 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.5(ಬಿ)ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಮಹಜರ ಕ್ರಮ ಜರುಗಿಸಿದ ಮಾರನೇ ದಿನ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನನ್ನ ಜೊತೆಗೆ ಚಾಸಾ-8 ರವರು ಹಾಜರಿದ್ದು, ಚಾಸಾ-1 ರವರು ಅಪಘಾತಕ್ಕೆ ಸಂಬಂಧಿಸಿದ ವಾಹನವನ್ನು ತೋರಿಸಿದ ಮೇರೆಗೆ ಮಹಜರ ಕ್ರಮ ಜರುಗಿಸಿ ಜಪ್ತು ಪಡಿಸಿಕೊಂಡಿರುತ್ತಾರೆ. ಆಗ ಸಮಯ ಸುಮಾರು ಮಧ್ಯಾಹ್ನ 3-00 ಗಂಟೆ ಆಗಿತ್ತು. ಸಾಕ್ಷಿಯು ನಿಪಿಃ6 ಮತ್ತು ನಿಪಿಃ7 ರ ಭಾವಚಿತ್ರಗಳಲ್ಲಿರುವ ಆಟೋವನ್ನು ನೋಡಿ ಗುರುತಿಸಿರುತ್ತಾರೆ. ಆದರೆ ಸದರಿ ಭಾವಚಿತ್ರಗಳನ್ನು ಎಲ್ಲಿ ಯಾವಾಗ ತೆಗೆಯಲಾಗಿದೆ ಎಂದು ಹೇಳಲು ಆಗುವುದಿಲ್ಲ.

**ಪಾಟೀ ಸವಾಲುಃ ಶ್ರೀ ಜಿ ಆರ್ ., ಆರೋಪಿಯ ಪರ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಪೊಲೀಸರು ಮಹಜರಿಗೆ

ಹಾಜರಾಗಲು ನೋಟೀಸ್ ನೀಡಿಲ್ಲ. ಸಾಕ್ಷಿಯು ಮುಂದುವರಿದು ಮೃತ ವ್ಯಕ್ತಿ ನನ್ನ ಮಾವನಾದ ಕಾರಣ ಚಾಸಾ-1ರವರು ಮಹಜರಿಗೆ ಕರೆದುಕೊಂಡು ಹೋಗಿರುತ್ತಾರೆ. ನಿಪಿಃ2ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿಃ2, 4 ಮತ್ತು 5 ಕ್ಕೆ ಸಹಿಗಳನ್ನು ಠಾಣೆಯಲ್ಲಿ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಒಂದು ಸಹಿಯನ್ನು ಠಾಣೆಯಲ್ಲಿ ಮತ್ತು ಇನ್ನೆರಡು ಸಹಿಗಳನ್ನು ಸ್ಥಳದಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿಃ2, 4 ಮತ್ತು 5ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ-1ರವರು ಹೇಳಿದ ಮೇರೆಗೆ ನಾನು ಮಹಜರ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ಪೊಲೀಸರು ಭಾವಚಿತ್ರಕ್ಕೆ ನಿಲ್ಲಲು ಹೇಳಿದ ಕಾರಣ ಭಾವಚಿತ್ರಕ್ಕೆ ನಿಂತಿರುತ್ತೇನೆ ಎಂದರೆ ಸರಿ. ಅಪಘಾತಕ್ಕೆ ಸಂಬಂಧಿಸಿದ ಆಟೋದ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ